(*d*) the number of such persons who are promoted during the last three years in the Department of Survey, Settlement and Land Records ?

Sri N. HUTCHAMASTHY GOWDA (Minister for Revenue).—

(*a*) Yes.

(*b*) None of the Cadre and Recruitment Rules of the erstwhile States bar the promotion of non-matribulates to Class II Posts.

(*c*) Does not arise in view of reply to clause (*b*) above.

(*d*) Nine.

.ಶ್ರೀ ವಿ. ಎಮ್. ಘಾಡಿ.—ಸರ್ವೆ, ಸೆಟಲ್‌ಮೆಂಟ್ ಮತ್ತು ಲ್ಯಾಂಡ್ ರೆಕಾರ್ಡ್ಸ್ ಇಲಾಖೆಯಲ್ಲಿ ಮೆಟ್ರಿಕ್ ಪಾಸ್ ಆದವರಿಗೆ ಪ್ರಮೋಷನ್ ಕೊಡಬೇಕು ಎಂದು ಕಟ್ಟು ನಿಯಮ ಇರುವಾಗ ಮೆಟ್ರಿಕ್ ಪಾಸ್ ಆಗದೇ ಇದ್ದವರಿಗೆ ಏತಕ್ಕೆ ಕೊಟ್ಟಿದ್ದೀರಿ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮೆಟ್ರಿಕ್ ಪಾಸ್ ಆಗಲೇಬೇಕು ಎಂಬ ನಿಯಮ ಇಲ್ಲದೇ ಇರುವುದರಿಂದ ಪ್ರಮೋಕ್ಷನ್ ಕೊಟ್ಟಿದೆ.

ಶ್ರೀ ವಿ. ಎಂ. ಘಾಡಿ.—ಮೆಟ್ರಿಕ್ ಪಾಸ್ ಆಗಬೇಕು ಎನ್ನುವ ನಿಯಮ ಇದ್ದೇ ಇದೆ. ಆದ್ದರಿಂದ ಇವರಿಗೆ ಪ್ರಮೋಷನ್ ಕೊಟ್ಟಿರುವುದು ತಪ್ಪು. ಅದನ್ನು ವಿಶೇಷೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನಗೆ ಗೊತ್ತಿರುವ ಪ್ರಕಾರ ಆ ರೀತಿ ನಿಯಮ ಇಲ್ಲ. ಮಾನ್ಯ ಸದಸ್ಯರು ಆ ರೀತಿ ನಿಯಮ ಇದ್ದೇ ಇದೆ ಎಂದು ಹೇಳುವುದರಿಂದ ಮತ್ತೆ ಅದನ್ನು ಪರಿಶೀಲನೆ ಮಾಡಿ ನೋಡಿ ಹೇಳುತ್ತೇನೆ.

AREA OF BUILDINGS OCCUPIED BY MINISTERS

8. Sri S. BANGARAPPA (Sorab).—

Will the Chief Minister be pleased to state :—

(*a*) whether it is a fact that the Minister including the Chief Minister are residing in big buildings in Bangalore ;

(*b*) if so, the area of each building occupied by Ministers (please furnish the area of the entire residence, *i.e.*, open space and dimension of the building) ?

Sri D. DEVARAJ URS (Chief Minister).—

(*a*) The buildings that have been allotted to the Ministers including the Chief Minister were constructed taking into account the dignity, functions and responsibilities attached to these offices.

(*b*) The area of each building is furnished in the statement appended, from which it may be seen that the quarters allotted to them are used for (1) Residence, (2) Office rooms, (3) Guest rooms and (4) Private apartments. The plinth area is commensurate with the various purposes for which it is being used and is commencurate with the functions of the Ministers.

(SRI D. DEVARAJ URS)

Statement regarding the area of buildings (in Sq. Yds.) occupied by Minister.

Sl. No.	Name of Government Buildings occupied by the Hon'ble Ministers	By whom occupied	Plinth area of the Building	Garage	Servants Quarters and out-house	Poultry and sheds	Open space	Remarks
1	2	3	4	5	6	7	8	9
1	K.K. Annexe No. 1 (Kumara Krupa)	Hon'ble Minister for P.W.D.	G.F. 345.33 Syd. F.F. 163.30 syd.	Out house Garage 175.6 syd	...	...	(syds) 10776	...
2	K. K. Annexe No. II (Kumara Krupa)	Hon'ble Chief Minister	GF 403.8 syd. FF 403.8 syd. Home Office 184.7	324.00	Guard Room 88.8	...	13,798.3	...
3	Sankey Road Quarter No. 31	Hon'ble Minister for Industries and Commerce.	GF. 213.5 FF. 213.5 Guest House 77.8 Bath Room 19.3	77.8	30.00	...	2,222.2	...
4	Sankey Road Quarter No. 30	Hon'ble Minister of State for Major Irrigation.	GF. 374 FF. 374	55.00	30.6	...	3,222.2	...

5	Sankey Road Quarter No. 29	Hon'ble Minister for Finance.	GF. 344.5 FF. 344.5 Guest House GF. 143.3 FF. 143.3	105.6	...	...	3,211.1	..
6	Housing Board Building No. 1, Shanthi Gruha.	Hon'ble Minister for Municipal Administration and Housing.	GF. 515.5 FF. 322.2 2nd Floor 19.00	933.3	...	...	7,377.8	...
7	No. 5,Cubbon Road Guest House.	Hon'ble Minister for Revenue	GF 635 Kitchen Block 151.5, Office Block 164.4, Stores 42.2	78.00	...	...	3,124.5	...
8	Cresent House Annexe Building.	Hon'ble Minister for Sericulture.	G.F. 500.7 Guest House 101.00	39.1	...	...	2,086.00	...
9	Cresent House	Hon'ble Minister for Education.	GF 800.0 FF 104.5	...	...	...	3,872.2	...
10	Race View Building.	Hon'ble Minister for Transport.	GF 1020.00 FF 72.8	39.1	...	...	7,099.5	...

1	2	3	4	5	6	7	8	9
11	Race View Cottage	Hon'ble Minister for Agriculture and Forests	GF 855.6 FF 100.00 Guest House 96.00	78.2	...	Cow Shed 28.00 Poultry Shed 124·5 Nissan shed 143.56	2,594.1	...
12	Housing Board Quarter No. 1, Cresent House Extension.	Hon'ble Minister for Community Development and Social Welfare.	GF 738.00 FF 582.6 2nd Floor 18.9	...	...	...	4,055.8	...
13	Housing Board Quarter No. 3.	Hon'ble Minister for Co-operation.	GF 916.7 FF 234.5 2nd Floor 18.9	...	...	...	3,313.4	...
14	3 Ministers Quarters Quarter No. 1	Hon'ble Minister for Law.	GF 44.58 FF 11.77	55.00	...	53.00	6,228.88	...
15	3 Ministers Quarters No. 2	Minister of State for Animal Husbandry.	GF 458.00 FF 177.00	54.00	...	21.00 32.00	2,671.33	...
16	Jayamahal Extension Quarters. A-1	Minister of State for Home.	GF 318.00 FF 201.88	41.8	89.20	40.00	2,011.00	...

17	Jayamahal Extension Quarters No. A-2.	Minister of State for Youth Services.	GF 318.00 FF 201.00	41.8	38.66	41.11	1,938.22	...
18	Jayamahal Extension Quarter No. B3.	Hon'ble Minister for Planningand Information.	GF 277.44 FF 155.55	41.8	25.00	43.55	706.66	...
19	Jayamahal Extension Quarter No. B4.	Hon'ble Minister for Fisheries.	GF 277.44 FF 155.55	41.8	20.66	11.11	743.44	...
20	Jayamahal Extension Quarters No. B5.	Hon'ble Minister of State for Finance.	GF 277.44 FF 155.55	41.8	19.10	53.55	702.55	...
21	Jayamahal Extension Quarter No. B-6.	Hon'ble Minister for Food and Civil Supplies.	GF 277.44 FF 155.55	41.8	18.55	33.33	722.22	...

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ಕೊಟ್ಟಿರತಕ್ಕಂಥ ಪಟ್ಟಿಯನ್ನು ನೋಡಿದರೆ ಮುಖ್ಯ ಮಂತ್ರಿಗಳು ವಾಸಮಾಡತಕ್ಕಂಥ ಮನೆ 13,798.3 ಸ್ಕ್ವೇರ್ ಯಾರ್ಡ್ಸ್ ಇದೆ. ತಾವು ಎಲೆಕ್ಷನ್ ಕಾಲದಲ್ಲಿ ಗರೀಬಿ ಹಟಾವೋ ಎನ್ನುವ ಘೋಷಣೆ ಮಾಡಿದ್ದೀರಿ. ಅದರಂತೆ ತಾವು ಒಂದು ಸಣ್ಣ ಮನೆಯಲ್ಲಿ ಜೀವನ ನಡೆಸಿ ಬಡವರಿಗೆ ಒಂದು ಮಾರ್ಗದರ್ಶಕವಾಗಿರತಕ್ಕಂಥ ರೀತಿಯಲ್ಲಿ ಇರಬೇಕಾಗಿತ್ತು. ಆ ರೀತಿ ತಾವು ಸಣ್ಣ ಮನೆಯಲ್ಲಿ ವಾಸ ಮಾಡಿಲ್ಲ. ಈ ರೀತಿ ಇಂಥಾ ದೊಡ್ಡ ದೊಡ್ಡ ಮನೆಗಳಲ್ಲಿ ವಾಸ ಮಾಡುವುದು ತಮ್ಮ ಘೋಷಣೆಗೆ ತಕ್ಕಂತೆ ಇದು ಒಳ್ಳೆಯದೇ, ಅಲ್ಲವೆ ತಿಳಿಸುತ್ತೀರಾ ?

2-00 P. M.

† ಶ್ರೀ ಡಿ. ದೇವರಾಜ ಅರಸ್.—ಈಗಿರುವ ಮನೆಗಳೆಲ್ಲಾ ಮೊದಲಿಂದ ಕಟ್ಟಿಕೊಂಡು ಬಂದಿರುವುದು, ಎರಡನೇಯದು ಈಗ ಇರತಕ್ಕ ಮನೆಗಳ ಬಗ್ಗೆ ನಾನು ಉತ್ತರದಲ್ಲಿ ಹೇಳಿದ್ದೇನೆ. Functions of the Ministers ಗೆ ಅಷ್ಟು ಜಾಗ ಬೇಕಾಗುತ್ತದೆ. ಮನೆಗಳು ಇಷ್ಟು ದೊಡ್ಡದು ಇದ್ದರೂ ಕೂಡ ಇದರೊಳಗೆ ನಮಗೆ ಮತ್ತು ಹೊರಗಡೆಯಿಂದ ನಮ್ಮನ್ನು ನೋಡುವುದಕ್ಕೆ ಬರ್ತಕ್ಕ ಜನರಿಗೆ ಕುಳಿತುಕೊಳ್ಳುವುದಕ್ಕೆ ಅಲ್ಲದೆ ಆಫೀಸು ನಡೆಸುವುದಕ್ಕೆ ಅವಕಾಶ ಮಾಡಿರುತ್ತದೆ. ಮಂತ್ರಿಗಳು ಸಣ್ಣ ಮನೆಗಳಲ್ಲಿ ಇದ್ದರೆ ಗರೀಬಿ ಹಟಾವೋ ಹೇಗೆ ಆಗುತ್ತದೆ ಎಂದು ಅರ್ಥವಾಗುವುದಿಲ್ಲ. ಅರೀತಿ ಒಂದುವೇಳೆ ಗರೀಬಿ ಹಟಾವೋ ಆಗುವುದಾದರೆ ಸಣ್ಣ ಮನೆಗಳಲ್ಲಿ ಇರೋಣ. ಮಂತ್ರಿ ಪದವಿ ಬಿಟ್ಟು ಹೋದರೆ ನಾನು ಇರತಕ್ಕಂಥ ಮನೆ ಚಿಕ್ಕದೇ. ಮಂತ್ರಿಯಾಗಿ ಪೆಡ್ ಹಾಕಿಕೊಂಡು ಇರಿ ಎಂದು ಹೇಳಿದರೂ ನಾನು ಇರುವುದಕ್ಕೆ ತಯಾರಿದ್ದೇನೆ. ಆದರೆ ಶ್ರೀಮಾನ್ ವಾಟಾಳ್ ನಾಗರಾಜ್ ಅಂತಹವರು ಬಂದರೆ ಅಲ್ಲಿ ಕೂತುಕೊಳ್ಳುವುದಕ್ಕೆ ಅವರಿಗೆ ಜಾಗ ಇರುವುದಿಲ್ಲ. ಈಗ ನಾವು ಇರತಕ್ಕ ಮನೆ ನಮ್ಮದು ಅಲ್ಲ. ನಾವು ಏನಾದರೂ ಸ್ವಂತವಾಗಿ ದೊಡ್ಡ ಮನೆ ಕಟ್ಟಿಕೊಂಡಿದ್ದರೆ ಆಗ ತಾವು ಹೇಳುವುದು ಸರಿ. ನಮ್ಮ ಹಳ್ಳಿ ಮನೆ ಮೊದಲು ಎಷ್ಟು ಇತ್ತೋ ಅಷ್ಟೇ ಇದೆ. ಮಂತ್ರಿಗಳಾಗಿ ನಾವು ಇಲ್ಲಿ ಇರುವುದು ದೇಶದ ಪರವಾಗಿ ಇರುವುದು. ದೇಶದ ಪರವಾಗಿ ಕೆಲಸಮಾಡುವುದಷ್ಟೆ. ಅದಕ್ಕೆ ಅಕಾಮೆಡೇಷನ್ ಎಷ್ಟುಬೇಕೋ ಅಷ್ಟಿದೆ.

ಶ್ರೀ ಎಸ್. ಬಂಗಾರಪ್ಪ.—ತಾವು ಈಗ ಮೊದಲನೇ ಪ್ರಶ್ನೆಗೆ ಉತ್ತರ ಕೊಡುವಾಗ ನಾವು ಕಟ್ಟಿದ್ದು ಅಲ್ಲ, ನಮ್ಮದು ಅಲ್ಲ ಎಂದು ಹೇಳಿದಿರಿ. ನೀವು ಚುನಾವಣೆ ಕಾಲದಲ್ಲಿ ಇಂಥ ಸಣ್ಣ ಮನೆಯಲ್ಲಿ ಅಲ್ಲದೆ ಬೇರೆ ದೊಡ್ಡ ಮನೆಯಲ್ಲಿ ಇರುವುದಿಲ್ಲ ಎಂದು ಹೇಳಿರಲಿಲ್ಲವೇ ? ಸಂದರ್ಶಕರು ಬರುತ್ತಾರೆ, ಮತ್ತೊಬ್ಬರು ಬರುತ್ತಾರೆ ಎಂದು ಸೇಳುತ್ತೀರಿ. ತಾವು ಸಾಮಾನ್ಯ ವರ್ಗದವರು ಮಾಡುವಂತಹ ಜೀವನ ಮಾಡುವುದಕ್ಕೆ ಚಿಕ್ಕ ಮನೆ ಹಿಡಿಯಬೇಕಾಗುತ್ತದೆ. ಅನೇಕ ಇಲಾಖೆಗಳ ಆಫೀಸುಗಳಿಗೆ ಬಾಡಿಗೆ ಕೊಡುತ್ತಿದ್ದೀರಿ. ನೀವು ಸಣ್ಣ ಮನೆಯಲ್ಲಿ ಸೇರಿಕೊಂಡು ಜೀವನ ಮಾಡಬೇಕಿತ್ತು. ದೊಡ್ಡ ಮನೆಯನ್ನೆಲ್ಲಾ ಇರಾಖೆ ಆಫೀಸುಗಳಿಗೆ ಕೊಡಬೇಕಿತ್ತು.

ಶ್ರೀ ಡಿ. ದೇವರಾಜ್ ಅರಸ್.—ನಾವು ಸಣ್ಣ ಮನೆಯಲ್ಲಿ ಇರಬಹುದು. ನಾನು ತಮಗೆ ಹೇಳುತ್ತೇನೆ. ಮಂತ್ರಿಯಾಗಿರುವವರಿಗೆ ಜನರು ಅವರ ಮನೆಗೆ ಬರುತ್ತಾರೆ. ಅವರನ್ನು ನೋಡುವುದು ಭೇಟಮಾಡುವುದು ಇರುವುದರಿಂದ ಆಫೀಸು ಕೆಲಸ ಏನು ಇರುತ್ತದೆ ಅದಕ್ಕೆ ಜಾಗ ಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಜನರೇ ಬರದೆ ಇರತಕ್ಕ ಮಂತ್ರಿಗಳು ಕೆಲವರು ಇದ್ದಾರೆ ; ಮದುವೆ ಆಗದೆ ಇರತಕ್ಕಂಥ ಮಂತ್ರಿಗಳು ಇದ್ದಾರೆ. ಶ್ರೀ ಮಾನ್ ಶಿವಣ್ಣನವರಿಗೆ ಮದುವೆಯಾಗಿಲ್ಲ ಏತಕ್ಕೆ ಅವರಿಗೆ ದೊಡ್ಡ ಮನೆ ಬೇಕು ? ಶ್ರೀಮಾನ್ ಚೆನ್ನಬಸಪ್ಪನವರ ಹತ್ತಿರ ಜನರು ಬರುವದಿಲ್ಲ ; ಏತಕ್ಕೆ ಅವರಿಗೆ ದೊಡ್ಡ ಮನೆ ಬೇಕು ? ನಿಮ್ಮ ಹತ್ತಿರ ಜನರು ಬರುತ್ತಾರೆ ನಿಮಗೆ ದೊಡ್ಡ ಮನೆ ಇರಲಿ. ಮದುವೆಯಾಗದೆ ಇರತಕ್ಕ ಒಬ್ಬ ಮಂತ್ರಿ ಇದ್ದಾರೆ. ಜನರು ಬರದೇ ಇರುವ ಮಂತ್ರಿಗಳು ಇದ್ದಾರೆ. ಗರೀಬಿ ಹಟಾವೋ ಎಂದು ಹೇಳುವಾಗ ಇದು ಬದಲಾವಣೆಯಾಗಬೇಕು. ಮದುವೆಯಾಗದೆ ಇರುವ ಮಂತ್ರಿಗಳಿಗೆ ಏತಕ್ಕೆ ದೊಡ್ಡ ಮನೆ ಬೇಕು ? ನಿಮ್ಮ ಬಗ್ಗೆ ನಾನು ಮಾತನಾಡುವುದಿಲ್ಲ. ಶ್ರೀಮಾನ್ ಸಿದ್ದವೀರಪ್ಪನವರ ಹತ್ತಿರ ಡಾಕ್ಟರು ಟ್ರಾನ್ಸ್‌ಫರ್‌ಗೆ ಬರುತ್ತಾರೆ ಆವರಿಗೆ ದೊಡ್ಡ ಮನೆ ಬೇಕು, ಒಪ್ಪಿಕೊಳ್ಳೋಣ. 22 ಜನರಲ್ಲಿ 4—5 ಜನರನ್ನು ಬಿಟ್ಟರೆ ಜನತಾ ಮಂತ್ರಿಮಂಡಲ ಎಂದು ಹೇಳುತ್ತೀರಾ ಅವರಿಗೆ ಜನರ ಸಂಪರ್ಕವೇ ಇಲ್ಲ. ಆದ್ದರಿಂದ ಅಂಥವರ ವಿಷಯದಲ್ಲಿ ದೊಡ್ಡಮನೆಗಳಿಗೆ ಬದಲಾಗಿ ಚಿಕ್ಕಮನೆಗಳನ್ನು ಕೊಡಲು ಅವಕಾಶ ಕಲ್ಪಿಸುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಮದುವೆ ಆಗದೆ ಇರುವ ಬ್ಯಾಚುಲರ್ಸ್‌ಗೆ ದೊಡ್ಡ ಮನೆ ಬೇಡ ಎಂದರೆ ಬ್ಯಾಚ್‌ಲರ್ಸ್ ಕ್ವಾರ್ಟರ್ಸ್ ಇನ್ನೂ ಕಟ್ಟಿಸಿಲ್ಲ. ನಾಗರಾಜ್ ಅವರು ಹೇಳಿದ ಸಲಹೆ ಸ್ವಲ್ಪ ಯೋಚನೆ ಮಾಡೋಣ. ಆಮೇಲೆ ಮದುವೆ ಆಗಿಬಿಟ್ಟರೆ ಬೇರೆ ಸ್ಥಿತಿ ಬರುತ್ತದೆ. ಚೆನ್ನಬಸಪ್ಪ ನವರ ವಿಚಾರ ಹೇಳಿದರು, ಅವರು ನನ್ನ ಪಕ್ಕದಲ್ಲೆ ಇದ್ದಾರೆ, ನೋಡುತ್ತಾ ಇರುತ್ತೇನೆ ಅಲ್ಲಿ ಜನ ಬರುತ್ತಾರೆ.

ಶ್ರೀ ಟಿ. ಆರ್. ಶಾಮಣ್ಣ.—ಲ್ಯಾಂಡ್ ರೀಫಾರಂಸ್ ಬಿಲ್ಲಿನಲ್ಲಿ 12 ಸಾವಿರ ರೂಪಾಯಿ ವರ ಮಾನ ನಿಗದಿ ಮಾಡಿ, ಓಂಪು ಸ್ಯಾಟ್ಯೂಲರ್ಸ್ ಫಿಕ್ಸ್ ಮಾಡಿದ್ದೀರಿ. ನಿಮ್ಮ ನಂಬಿಕೆ ವಾಸಮಾಡ ತಕ್ಕ ಮನೆ ತೆಗೆದುಕೊಂಡರೆ 36 ಸಾವಿರ ರೂಪಾಯಿ ಆಗುತ್ತದೆ. ಅವರ ಸ್ಯಾಟ್ಯೂಲರ್ಡ್ ನಿಮ್ಮ ಸ್ಯಾಟ್ಯೂಲರ್ಡ್ ವ್ಯತ್ಯಾಸ ಇಟ್ಟುಕೊಳ್ಳುವುದು ನ್ಯಾಯವೇ ? ಬೊಧನೆ ಮಾಡತಕ್ಕವರು, ದಾರಿ ಹೇಳಿಕೊಡತಕ್ಕವರು ಯಾವರೀತಿ ಹೇಳುತ್ತಾರೆ ಅದೇ ರೀತಿಯಾಗಿ ನಡೆದುಕೊಳ್ಳಬೇಡವೇ ?

ಶ್ರೀ ಡಿ. ದೇವರಾಜ ಅರಸ್.—ನಾನು ವಿತ್ತಂಡವಾದಕ್ಕೆ ಹೋಗುವುದಿಲ್ಲ. ನಾವು ಮಂತ್ರಿ ಗಳಾಗಿದ್ದೀವಿ. ನೀವೆಲ್ಲಾ ಎಂ ಎಲ್ ಎ ಗಳಾಗಿದ್ದೀರಿ ಎಂ ಎಲ್ ಎ ಗಳಿಗೆ 500 ರೂಪಾಯಿ ಬರುತ್ತದೆ. ಎಂ ಎಲ್ ಗಳಲ್ಲದವರಿಗೆ ಎಷ್ಟು ಜನಕ್ಕೆ 500 ರೂಪಾಯಿ ಬರುತ್ತಿದೆ ? ಅದರಿಂದ ಸರಿತಿ ಹೇಳುವು ದನ್ನ ನೀವು ಬಿಟ್ಟು ಬಿಡಿ. ಸಾರ್ವತ್ರಿಕ ಕೆಲಸ ಮಾಡುವವರು ಬೇರೆ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲದೆ ಇರುವುದರಿಂದ ಸರ್ಕಾರ ಇದನ್ನು ಯೋಚನೆ ಮಾಡಿ ಯಾರಿಗೆ ಏನು ಕೊಡಬೇಕು ಎಂದು ನಿಗದಿ ಮಾಡಿದ್ದಾರೆ ಕೆಲವು ಸಂದರ್ಭಗಳಲ್ಲಿ ಎಂ. ಎಲ್. ಎ. ಆಗುವೆ ಇರುವಾಗ ಎಷ್ಟು ಅವರ ವರಮಾನ ಬರುತ್ತದೆ ಅದಕ್ಕಿಂತ ಇನ್ನು ಹೆಚ್ಚಿಗೆ ಕೂಡ ಬರುತ್ತದೆ. ಮಂತ್ರಿಗಳು ಅಷ್ಟೆ ಹೆಚ್ಚು ವರಮಾನ ಬರುವವರು ಇದ್ದಾರೆ. ಕೆಲವು ಲಾಯರುಗಳು ತಿಂಗಳಿಗೆ 4-5 ಸಾವಿರ ರೂಪಾಯಿ ಸಂಪಾದನೆ ಮಾಡುತ್ತಾರೆ. ಪ್ರೊಫೆಷನ್ ಬಿಟ್ಟು ಬರುವಾಗ ಕಮ್ಮಿ ಸಂಭಾವನೆ ಅದರೂ ಕೆಲಸ ಮಾಡುತ್ತಾರೆ. ಆದುದರಿಂದ ಅವರ ವರಮಾನ ಅದರ ಮೇಲೆ ಹೋಗುವುದಿಲ್ಲ. ಅವರು ಯಾವ ಕೆಲಸವನ್ನು ಮಾಡುವುದಕ್ಕೆ ಅವಕಾಶ ಇಲ್ಲದೆ ಇರುವುದರಿಂದ ಸಾರ್ವತ್ರಿಕವಾಗಿ ಕೆಲಸ ಮಾಡುವಾಗ ಅವರಿಗೆ ಸಂಭಾವನೆ ಕೊಟ್ಟುಕೊಂಡು ಬಂದಿರುತ್ತಾರೆ. ಆದ್ದರಿಂದ ಅದಕ್ಕೂ ಇದಕ್ಕೂ ಕಂಪೇರ್ ಮಾಡುವುದು ಆಪ್ಟು ಸರಿಹೋಗುವುದಿಲ್ಲ.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ಕಾಲವು ಮುಗಿದಿದೆ.

QUESTIONS FOR ANSWERS ON THE DAY

(But not taken up)

LANDS IN MUNDARGI TALUK

113. Sri K. H. KURADAGI (Mundargi).—

Will the Minister for Agriculture and Forests be pleased to state :—

(*a*) whether the lands under some Tanks in Mundargi Taluk are becoming saline ;

(*b*) whether any action has been taken to prevent this ?

Sri K. H. PATIL (Minister for Agriculture and Forests).—

(*a*) Yes.

(*b*) Yes.